# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **462** |
| ಸದಸ್ಯರ ಹೆಸರು | : | ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿರಾದವರು) |
| ಉತ್ತರಿಸುವ ದಿನಾಂಕ | : | 30-01-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಬರುವ ತಡೋಳಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ "ಜಲ ಸಿಂಚಾಯಿ" ಯೋಜನೆಯ ಕಾಮಗಾರಿಗಳು ಯಾವುವು, ನಿಗದಿ ಪಡಿಸಿರುವ ಅನುದಾನ ಎಷ್ಟು ಪ್ರಾರಂಭಿಸಿದ ವರ್ಷ ಯಾವುದು, ಯಾವ ಹಂತದಲ್ಲಿವೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು; | ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನ ಮಾಡುತ್ತಿರುವ "ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2.O (WDC-PMKSY 2.O)" ಯೋಜನೆಯು ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಬರುವ ತಡೋಳಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2021-22ನೇ ಸಾಲಿನ ಫೆಬ್ರವರಿ 2022ರ ಮಾಹೆಯಿಂದ ಅನುಷ್ಠಾನದಲ್ಲಿರುತ್ತದೆ. ಸದರಿ ಯೋಜನೆಯಡಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳಾದ "ಕಂದಕದೊಂದಿಗೆ ಬದು ನಿರ್ಮಾಣ, ಗೋಕಟ್ಟೆ ಮತ್ತು ಕೃಷಿ ಹೊಂಡ" ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.<br>ತಡೋಳಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ರೂ.638.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ.<br>ಪ್ರಸ್ತುತ ಯೋಜನೆಯ ಕಾಮಗಾರಿಗಳು ಕ್ರೋಢೀಕರಣ ಮತ್ತು ಹಿಂಪಡೆಯುವಿಕೆ (Consolidation Withdrawal Phase) ಹಂತದಲ್ಲಿದ್ದು, ಈ ಯೋಜನೆಯು ಕೇಂದ್ರ ಸರ್ಕಾರದ ಸೂಚನೆಯಂತೆ 2025-26ನೇ ಅಂತ್ಯದಲ್ಲಿ ಪೂರ್ಣಗೊಳ್ಳಲಿದೆ. ಕಾಮಗಾರಿಗಳು ನಿಗದಿತ ಯೋಜನಾ ಅವಧಿ ಅಂದರೆ 2025-26ನೇ ಸಾಲಿನಲ್ಲಿಯೇ ಪೂರ್ಣಗೊಳ್ಳಲಿವೆ. |
| ಆ) | "ಜಲ ಸಿಂಚಾಯಿ" ಯೋಜನೆಯ ಕಾಮಗಾರಿಗಳು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದಿರಲು ಕಾರಣವೇನು; ಕೃಷಿ ಉಪಕರಣಗಳನ್ನು ರೈತರಿಗೆ ಹಂಚಲು ವಿಳಂಬವಾಗಲು ಕಾರಣವೇನು; ಯಾವಾಗ ಹಂಚಲಾಗುವುದು; | ತಡೋಳಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ "ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2.O (WDC-PMKSY 2.O)" ಯೋಜನೆಯ ಜಲಾನಯನ ಕಾಮಗಾರಿಗಳನ್ನು ಈಗಾಗಲೇ ಪೂರ್ಣ ಗೊಳಿಸಲಾಗಿದೆ.<br>ಈ ಯೋಜನೆಯು 5 ವರ್ಷದ ಅವಧಿಗೆ ಮಂಜೂರಾಗಿದ್ದು, 2021-22ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಅನುಷ್ಠಾನದಲ್ಲಿರುತ್ತದೆ.<br>ಈ ಯೋಜನೆಯಡಿ ಬರುವ ಉತ್ಪಾದನಾ ವ್ಯವಸ್ಥೆ, ಆದಾಯ ಉತ್ಪನ್ನ ಚಟುವಟಿಕೆ ಮತ್ತು ಪ್ರವೇಶದ್ವಾರ |

| | | |
|---|---|---|
| | | ಚಟುವಟಿಕೆ ಘಟಕದಡಿ ಕೃಷಿ ಉಪಕರಣಗಳನ್ನು ಯೋಜನಾ ವ್ಯಾಪ್ತಿಯ ಫಲಾನುಭವಿಗಳಿಗೆ ಈಗಾಗಲೇ ವಿತರಿಸಲಾಗಿದೆ. ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | "ಜಲ ಸಿಂಚಾಯಿ" ಯೋಜನೆಯ ಉಸ್ತುವಾರಿಗೆ ಅನುಷ್ಠಾನ ಸಮಿತಿ ರಚಿಸಲಾಗಿದೆಯೇ; ಇದರ ಕಾರ್ಯ ವ್ಯಾಪ್ತಿಯೇನು ಹಾಗೂ ಸಮಿತಿ ಸಕ್ರಿಯವಾಗಿಲ್ಲದೆ ಇರುವುದರಿಂದ ಯೋಜನೆಯ ಕಾಮಗಾರಿಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಅನುಷ್ಠಾನ ಸಮಿತಿ ರಚನೆಯ ಪತ್ರ ನೀಡುವುದು) | "ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2.O (WDC-PMKSY 2.O)" ಯೋಜನೆಯ ಅನುಷ್ಠಾನಕ್ಕೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ "ಜಲಾನಯನ ಸಮಿತಿ"ಯನ್ನು (Watershed Committe) ಕೇಂದ್ರ ಸರ್ಕಾರದ ಸೂಚನೆಯಂತೆ ರಚಿಸಲಾಗಿದೆ.<br><br>ಈ ಸಮಿತಿಯು ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕಿರು ಜಲಾನಯನಗಳಲ್ಲಿ ಜಲಾನಯನ ಯೋಜನೆಗಳನ್ನು ಯೋಜಿಸುವುದು, ಯೋಜನೆಗಳ ಅರಿವು ಮೂಡಿಸುವುದು, ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಯೋಜನಾ ಅನುಷ್ಠಾನ ಸಂಸ್ಥೆಯ (Project Implementing agency) ತಾಂತ್ರಿಕ ಸಹಕಾರದೊಂದಿಗೆ ಕೈಗೊಳ್ಳುತ್ತದೆ.<br><br>ಈ ಯೋಜನೆಯು 5 ವರ್ಷದ ಅವಧಿಗೆ ಮಂಜೂರಾಗಿದ್ದು, ಯೋಜನೆಯನ್ನು 2021-22ನೇ ಸಾಲಿನಿಂದ 2025-26ನೇ ಸಾಲಿನವರೆಗೆ ಅನುಷ್ಠಾನದಲ್ಲಿರುತ್ತದೆ.<br>ಅನುಷ್ಠಾನ ಸಮಿತಿ ರಚನೆಯ ಆದೇಶದ ಪ್ರತಿ ಲಗತ್ತಿಸಿದೆ |

*ಕಡತ ಸಂಖ್ಯೆ:ಕೃಇ 27 ಎಎಂಎಸ್ 2026*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು